**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಗುಂಡ್ಲುಪೇಟೆ**

**ಸಿ.ಸಿ ನಂ.927/2025**

| | | |
|---|---|---|
| **ಫಿರ್ಯಾದುದಾರರು** | : | ಕರ್ನಾಟಕ ರಾಜ್ಯದ ಪರವಾಗಿ<br>ಗುಂಡ್ಲುಪೇಟೆ ಪೊಲೀಸ್ ಠಾಣೆ |

**ವಿರುದ್ಧ**

| | | |
|---|---|---|
| **ಆರೋಪಿ** | : | ಗುರುಪಾದಪ್ಪ ಮತ್ತು ಇನ್ನೊಬ್ಬರು |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ದಾಖಲಿಸಿಕೊಂಡ ಆರೋಪಿಯ ಹೇಳಿಕೆ**

| | | |
|---|---|---|
| ಆರೋಪಿಯ ಹೆಸರು | : | ಗುರುಪಾದಪ್ಪ |
| ತಂದೆಯ ಹೆಸರು | : | ಕಡೆಯಟ್ಟಿಮಾದಪ್ಪ |
| ವಯಸ್ಸು | : | 38 ವರ್ಷ |
| ವಾಸ | : | ಹೊನ್ನೇಗೌಡನಹಳ್ಳಿ ಗ್ರಾಮ<br>ಗುಂಡ್ಲುಪೇಟೆ ತಾಲ್ಲೂಕು. |

**ಪ್ರಶ್ನೆ – 1 :** ಇದುವರೆವಿಗೂ ಅಭಿಯೋಜನೆಯವರ ಪರ ಹೇಳಿಕೆ ಕೊಟ್ಟಿರುವ ಸಾಕ್ಷಿದಾರರ ಹೇಳಿಕೆ ಕೇಳಿದ್ದೀರಾ?

**ಉತ್ತರ :**

**ಪ್ರಶ್ನೆ – 2 : ಚಾಸಾ–1/ಪ್ರಾಸಾ–1 ವೀರಭದ್ರಪ್ಪ ರವರು ತಮ್ಮ ಸಾಕ್ಷ್ಯದಲ್ಲಿ**, ಚಾಸಾ–2, 3 ರವರು ತನ್ನ ಸಹೋದರಿಯರು, ಚಾಸಾ–4 ಮತ್ತು 5 ರವರು ತನ್ನ ಸಹೋದರರು, ಆರೋಪಿತರಾದ ನಿಮ್ಮ ಪರಿಚಯವಿರುತ್ತದೆ, ಈಗ್ಗೆ ಎರಡು ವರ್ಷಗಳ ಹಿಂದೆ ರಾತ್ರಿ 8.30 ಗಂಟೆ ಸುಮಾರಿಗೆ ತಾನು ಮನೆಯಲ್ಲಿದ್ದಾಗ,

ಆರೋಪಿತರಾದ ನೀವುಗಳು ಚುನಾವಣಾ ವಿಚಾರದಲ್ಲಿ ತಮ್ಮ ಮನೆಯ ಹತ್ತಿರ ಬಂದು ಚುನಾವಣೆಯಲ್ಲಿ ಮತ ಹಾಕಿಲ್ಲ ಎಂದು ದೊಣ್ಣೆಯನ್ನು ತೆಗೆದುಕೊಂಡು ಬಂದು 1ನೇ ಆರೋಪಿಯಾದ ನೀವು ಭಾಗ್ಯಮ್ಮರವರ ತೊಡೆ ಮತ್ತು ಹೊಟ್ಟೆಗೆ ಹೊಡೆದಿರುತ್ತೀರಿ, ಆ ಸಮಯದಲ್ಲಿ ಚಾಸಾ–4 ಸ್ವಾಮಿರವರು ಬಂದು ಜಗಳ ಬಿಡಿಸಿರುತ್ತಾರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 3 : ಫ್ರಾಸಾ–1 ರವರು ಮುಂದುವರೆದ ತಮ್ಮ ಮುಖ್ಯ ವಿಚಾರಣೆಯಲ್ಲಿ**, ಚಾಸಾ–3 ರತ್ನಮ್ಮರವರಿಗೆ 2ನೇ ಆರೋಪಿಯಾದ ನೀವು ತಲೆಯ ಜುಟ್ಟನ್ನು ಹಿಡಿದುಕೊಂಡು ಎಳೆದಾಡಿರುತ್ತೀರಿ, ಈ ಬಗ್ಗೆ ನಿಪಿ–1 ರಂತೆ ದೂರನ್ನು ನೀಡಿರುತ್ತೇನೆ, ಆ ದಿನ 1ನೇ ಆರೋಪಿಯಾದ ನೀವು ಹೊಡೆಯಲು ಉಪಯೋಗಿಸಿದ ಮುದ್ದೆ ಮಾಲು–1 ದೊಣ್ಣೆಯನ್ನು ನೋಡಿ ಗುರುತಿಸಿರುವುದಾಗಿ, ತಾನು ದೂರನ್ನು ನೀಡಿದ ನಂತರ ಮಾರನೇಯ ದಿನ ಘಟನಾ ಸ್ಥಳಕ್ಕೆ ಪೊಲೀಸರು ಬಂದು ಮಧ್ಯಾಹ್ನ 2.00 ರಿಂದ 3.00 ಗಂಟೆಯವರೆಗೆ ಮಹಜರ್ ಮಾಡಿ ಶಿವಮಲ್ಲಪ್ಪ, ನಾಗೇಶ ಮತ್ತು ತನ್ನ ಸಹಿ ಪಡೆದಿರುತ್ತಾರೆ, ಮಹಜರ್ ಕಾಲಕ್ಕೆ ಮುದ್ದೆ ಮಾಲು–1 ದೊಣ್ಣೆಯನ್ನು ಅಮಾನತ್ತು ಪಡಿಸಿಕೊಳ್ಳಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 4 : ಚಾಸಾ–2/ಫ್ರಾಸಾ–2 ಭಾಗ್ಯರವರು ತಮ್ಮ ಸಾಕ್ಷ್ಯದಲ್ಲಿ**, ಚಾಸಾ–1 ತನ್ನ ಅಣ್ಣ, ಚಾಸಾ–3 ತನ್ನ ತಂಗಿ, ಚಾಸಾ–4 ಮತ್ತು 5 ರವರು ತನ್ನ ತಮ್ಮಂದಿರು, ಆರೋಪಿಗಳಾದ ನಿಮ್ಮ ಪರಿಚಯವಿರುತ್ತದೆ, ಎರಡು ವರ್ಷಗಳ ಹಿಂದೆ ರಾತ್ರಿ 8.30 ಗಂಟೆ ಸಮಯದಲ್ಲಿ ತಾನು, ತನ್ನ ಅಣ್ಣ ಮನೆಯಲ್ಲಿದ್ದಾಗ, ಆರೋಪಿಗಳಾದ

ನೀವುಗಳು ಮನೆಯ ಹತ್ತಿರ ಬಂದು ಗಲಾಟೆ ಮಾಡಿರುತ್ತೀರಿ ಹಾಗೂ ದೊಣ್ಣೆಯಿಂದ ಹೊಡೆದಿರುತ್ತೀರಿ, ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ, ಆರೋಪಿತರಾದ ನೀವುಗಳು ನಿಮಗೆ ಮತ ಹಾಕಿಲ್ಲ ಎಂದು ಗಲಾಟೆ ಮಾಡಿರುತ್ತೀರಿ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 5 : ಫ್ರಾಸಾ–2 ರವರು ಮುಂದುವರೆದ ತಮ್ಮ ಮುಖ್ಯ ವಿಚಾರಣೆಯಲ್ಲಿ**, ತನಗೆ 2ನೇ ಆರೋಪಿಯಾದ ನೀವು ದೊಣ್ಣೆಯಿಂದ ಹೊಡೆದಿರುತ್ತೀರಿ, 2ನೇ ಆರೋಪಿಯಾದ ನೀವು ತನ್ನ ಸೀರೆಯನ್ನು ಹಿಡಿದು ಎಳೆದಾಡಿರುತ್ತೀರಿ, ಸ್ವಾಮಿ ಮತ್ತು ವೀರಭದ್ರಪ್ಪ ಬಂದು ಜಗಳ ಬಿಡಿಸಿರುತ್ತಾರೆ, ಮುದ್ದೆ ಮಾಲು–1 ದೊಣ್ಣೆಯನ್ನು ನೋಡಿ ಗುರುತಿಸಿರುವುದಾಗಿ, ತಾನು ಗಲಾಟೆಯಾದ ನಂತರ ನ್ಯಾಯಾಲಯಕ್ಕೆ ಬಂದು ನ್ಯಾಯಾಧೀಶರ ಮುಂದೆ ನಿಪಿ–3 ರಂತೆ ಹೇಳಿಕೆ ನೀಡಿರುತ್ತೇನೆ, ತಾನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 6 : ಚಾಸಾ–3/ಫ್ರಾಸಾ–3 ರತ್ನಮ್ಮ ರವರು ತಮ್ಮ ಸಾಕ್ಷ್ಯದಲ್ಲಿ**, ಚಾಸಾ–1, 2, 4 ಮತ್ತು 5 ರವರ ಪರಿಚಯವಿರುತ್ತದೆ, ಆರೋಪಿತರಾದ ನಿಮ್ಮ ಪರಿಚಯವಿರುತ್ತದೆ, ದಿಃ 14.01.2021 ರಂದು ರಾತ್ರಿ 8.30 ಗಂಟೆ ಸುಮಾರಿಗೆ ತಾನು, ತನ್ನ ಅಣ್ಣ ಮತ್ತು ಭಾಗ್ಯರವರು ಮನೆಯಲ್ಲಿದ್ದಾಗ, ತಮ್ಮ ಪಕ್ಕದ ಮನೆಯವರಾದ ಗುರುಪಾದಪ್ಪ, ರೇಖಾರವರು ತಮ್ಮ ಮನೆಯ ಹತ್ತಿರ ಬಂದು ಚುನಾವಣಾ ವಿಚಾರವಾಗಿ ಬೋಳಿಮಕ್ಕಳೇ, ಸೂಳೇ ಮಕ್ಕಳೇ ಎಂದು ಅವಾಚ್ಯ

ಶಬ್ದಗಳಿಂದ ಬೈದು ತನ್ನ ಅಕ್ಕ ಭಾಗ್ಯನಿಗೆ ಹೊಡೆದಿರುತ್ತೀರಿ, ರೇಖಾ ಆದ ನೀವು ತನ್ನ ಅಕ್ಕನ ಸೀರೆ ಹಿಡಿದು ಎಳೆದಾಡಿರುತ್ತೀರಿ, ತಾನು ಜಗಳ ಬಿಡಿಸಿರುತ್ತೇನೆ, ಈ ಬಗ್ಗೆ ತಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ, ಮುದ್ದೆ ಮಾಲು-1 ಹಾಗೂ ಆರೋಪಿತರಾದ ನಿಮ್ಮನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ - 7 : ಚಾಸಾ-8/ಪ್ರಾಸಾ-7 ಜಿ ರಮೇಶ ರವರು ತಮ್ಮ ಸಾಕ್ಷ್ಯದಲ್ಲಿ**, ದಿಃ 15.01.2021 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ನಿಪಿ-1 ರ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 14/2021 ರಂತೆ ಪ್ರಕರಣ ದಾಖಲಿಸಿ ನಿಪಿ-5 ರಂತೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ, ಅದೇ ದಿನ ಚಾಸಾ 2 ರವರ ನಿಪಿ-6 ಗಾಯದ ಪ್ರಮಾಣ ಪತ್ರವನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಯಿಂದ ಪಡೆದುಕೊಂಡಿರುತ್ತೇನೆ, ದಿಃ 16.01.2021 ರಂದು ಚಾಸಾ 1 ತೋರಿಸಿದ ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 5 ಮತ್ತು 6 ರವರನ್ನು ಬರಮಾಡಿಕೊಂಡಿ ವಿಷಯ ತಿಳಿಸಿ ಅವರು ಒಪ್ಪಿದ ಮೇರೆಗೆ ಮಧ್ಯಾಹ್ನ 2.15 ರಿಂದ 3.00 ಗಂಟೆಯವರೆಗೆ ಪಂಚನಾಮೆ ಸಾಕ್ಷಿಗಳ ಸಮಕ್ಷಮ ನಿಪಿ 2 ರಂತೆ ಸ್ಥಳ ಪಂಚನಾಮೆ ಕ್ರಮ ಜರುಗಿಸಿ ಕೃತ್ಯಕ್ಕೆ ಬಳಸಿದ ಮುದ್ದೆ ಮಾಲು 1 ದೊಣ್ಣೆಯನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ ಎಂದು ಮುದ್ದೆ ಮಾಲು 1ನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 8 : ಫ್ರಾಸಾ–7 ರವರು ಮುಂದುವರೆದ ತಮ್ಮ ಮುಖ್ಯ ವಿಚಾರಣೆಯಲ್ಲಿ**, ಅದೇ ದಿನ ನಂತರ ಠಾಣೆಗೆ ಬಂದು ಮುದ್ದೆ ಮಾಲುಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ, ನಿಪಿ 2 ರ ದಾಖಲೆಗೆ ನಿಪಿ 2(ಸಿ) ರಂತೆ ಸಹಿ ಮಾಡಿರುವುದಾಗಿ, ಅದೇ ದಿನ ಚಾಸಾ 3 ಮತ್ತು 4 ರವರ ಹೇಳಿಕೆ ದಾಖಲಿಸಿರುತ್ತೇನೆ, ದಿಃ 06.04.2021 ರಂದು ಚಾಸಾ 2 ರವರ ಹೇಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 164 ರ ಅಡಿಯಲ್ಲಿ ದಾಖಲಿಸಲು ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಹಾಜರುಪಡಿಸಿರುತ್ತೇನೆ ಮತ್ತು ಅದರ ಪ್ರತಿಯನ್ನು ಪಡೆದಿರುತ್ತೇನೆ ಎಂದು ನಿಪಿ 3 ಹೇಳಿಕೆಯನ್ನು ನೋಡಿ ಗುರುತಿಸಿರುವುದಾಗಿ, ದಿಃ 12.10.2021 ರಂದು ಆದ ಜಾಮೀನು ಆದೇಶವನ್ನು ಪಡೆದು ಆರೋಪಿಗಳಾದ ನೀವುಗಳು ಠಾಣೆಗೆ ಹಾಜರಾದ ಮೇರೆಗೆ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಟ್ಟಿರುತ್ತೇನೆ ಎಂದು 1ನೇ ಆರೋಪಿಯನ್ನು ನೋಡಿ ಗುರುತಿಸಿರುವುದಾಗಿ, ತನಿಖೆ ಪೂರ್ಣಗೊಂಡಿದ್ದು ಆರೋಪಿಗಳಾದ ನಿಮ್ಮ ವಿರುದ್ಧ ಆರೋಪ ಸಾಬೀತಾದ್ದರಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ – 9 : ಫ್ರಾಸಾ–8 ಡಾ. ಮಂಜುನಾಥ ರವರು ತಮ್ಮ ಸಾಕ್ಷ್ಯದಲ್ಲಿ**, ದಿಃ 15.01.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚಾಸಾ 2 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು ಅವರನ್ನು ಚಾಸಾ 7 ರವರು ಪರೀಕ್ಷಿಸಿ ಚಿಕಿತ್ಸೆ ನೀಡಿರುತ್ತಾರೆ ಮತ್ತು ಅವರಿಗೆ ಎಡ ಮಂಡಿಯ ಒಳಭಾಗದಲ್ಲಿ ಮುಟ್ಟಿದರೆ ನೋವಿನ ಅನುಭವದ ಗಾಯ ಉಂಟಾಗಿರುವುದಾಗಿ ನಮೂದಿಸಿರುತ್ತಾರೆ, ಈ ಗಾಯವು ಸಾಮಾನ್ಯ ಸ್ವರೂಪದ್ದು ಎಂದು ಚಾಸಾ 7

ರವರು ನಿಪಿ 6 ರಂತೆ ಗಾಯದ ಪ್ರಮಾಣ ಪತ್ರ ನೀಡಿರುತ್ತಾರೆ, ನಿಪಿ 6 ರಲ್ಲಿ ಚಾಸಾ 7 ರವರ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿಪಿ 6(ಬಿ) ಎಂದು ಗುರ್ತಿಸಲಾಯಿತು, ಮುದ್ದೆ ಮಾಲು 1 ರಿಂದ ಹಲ್ಲೆ ಮಾಡಿದರೆ ಸದರಿ ಗಾಯವು ಉಂಟಾಗುವ ಸಾಧ್ಯತೆ ಇದೆ, ನಿಪಿ 6 ರಲ್ಲಿ ಬರೆದಿರುವ ಬರವಣಿಗೆಗಳು ಚಾಸಾ 7 ರವರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

**ಉತ್ತರಃ**

**ಪ್ರಶ್ನೆ –10:** ಮೊಕದ್ದಮೆಯಲ್ಲಿ ನಿಮ್ಮ ಪರ ಯಾರನ್ನಾದರೂ ಸಾಕ್ಷಿಗಳನ್ನಾಗಿ ವಿಚಾರಣೆ ಮಾಡುತ್ತೀರಾ?

**ಉತ್ತರಃ**

**ಪ್ರಶ್ನೆ–11 :** ಈ ಮೊಕದ್ದಮೆಯಲ್ಲಿ ನೀವು ಮತ್ತೇನಾದರೂ ಹೇಳುವುದಿದೆಯೇ?

**ಉತ್ತರಃ**

(ದಿನಾಂಕಃ 03.06.2026 ರಂದು ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ನನ್ನ ಸಮಕ್ಷಮ ಪಡೆದುಕೊಂಡು ಮೇಲ್ಕಂಡ ಪ್ರಶ್ನೆಗಳಿಗೆ ಆರೋಪಿಯು ತಮ್ಮ ಸ್ವ ಇಚ್ಛೆಯಿಂದ ಹೇಳಿಕೆ ಕೊಟ್ಟಿರುತ್ತಾರೆ ಎಂದು ನಾನು ದೃಢಪಡಿಸುತ್ತೇನೆ)

**(ದೀಪು ಎಂ ಟಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.**

**1ನೇ ಆರೋಪಿಯ ಸಹಿ :**